<u>**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.**</u>

<u>**ಸಿಸಿ ನಂ.208/2020**</u>

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಪೊಲೀಸ್ ಠಾಣೆ,

-ಃ ವಿರುದ್ದ ಃ-

ಆರೋಪಿ ನಂಃ 1. ಮಾಹಾದೇವಪ್ಪಾ ತಂದೆ ಬಸಪ್ಪಾ @ ಬಸಣ್ಣಾ ಕುಂಬಾರ
ವಃ 40 ವರ್ಷ, ಉಃ ಒಕ್ಕಲುತನ

2. ಹಣಮಂತ ತಂದೆ ಬಸಪ್ಪಾ @ ಬಸಣ್ಣಾ ಕುಂಬಾರ
ವಃ 55 ವರ್ಷ, ಉಃ ಒಕ್ಕಲುತನ

3. ಬುಗ್ಗಪ್ಪಾ ತಂದೆ ಬಸಪ್ಪಾ @ ಬಸಣ್ಣಾ ಕುಂಬಾರ
ವಃ 45 ವರ್ಷ, ಉಃ ಒಕ್ಕಲುತನ
ಎಲ್ಲರೂ ಸಾಃ ದುಗನೂರ ಗ್ರಾಮ, ತಾಃ ಸೇಡಂ

----

<u>**ದೋ ಷಾ ರೋ ಪ ಣೆ**</u>

ನಾನು **ಶ್ರೀ ಬಾಲು**, ಬಿ.ಎ.,ಎಲ್.ಎಲ್.ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 16-12-2019 ರಂದು ಮಧ್ಯಾಹ್ನ 3-30 ಗಂಟೆ ಸುಮಾರಿಗೆ ಸೇಡಂ ಪೊಲೀಸ ಠಾಣಾ ವ್ಯಾಪ್ತಿಯಲ್ಲಿ ಬರುವ ದುಗನೂರ ಗ್ರಾಮದ ಹತ್ತಿರ ಇರುವ ಫಿರ್ಯಾದಿಯ ಹೊಲದ ಹತ್ತಿರ ಸೇಡಂ ಗುರಮಿಟಕಲ ಮುಖ್ಯ ರಸ್ತೆಯಲ್ಲಿ ಚಾಸಾ.1 ಮತ್ತು 4 ನೇದ್ದವರು ಕೂಡಿ ಮನೆಯಿಂದ ತಮ್ಮ ಹೊಲಕ್ಕೆ ಹೊಗುತ್ತಿದ್ದಾಗ ಆರೋಪಿ 1 ರಿಂದ 3 ನೇದ್ದವರು ಕೂಡಿ ಬಂದು ಚಾಸಾ.1 ಮತ್ತು 4 ನೇದ್ದವರಿಗೆ ಹೊಲದಲ್ಲಿ ಹೊಗದಂತೆ ರಸ್ತೆಯಲ್ಲಿ ತಡೆದು ನಿಲ್ಲಿಸಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 341 ಸಂಗಡ 34ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಎರಡನೆಯದಾಗಿ ಮೇಲೆ ಹೇಳಲಾದ ದಿನ ಸಮಯ ಮತ್ತು ಸ್ಥಳದಲ್ಲಿ ಆರೋಪಿತರೆಲ್ಲರೂ ಏಕೋದ್ದೇಶವನ್ನು ಈಡೇರಿಸಿಕೊಳ್ಳುವ ಸಲುವಾಗಿ ಬಂದು ಆರೋಪಿ.1 ನೆದ್ದವನು ಚಾಸಾ.1 ನೆದ್ದವರ ಜೊತೆಯಲ್ಲಿ ಕುಸ್ತಿಗೆ ಬಿದ್ದು ಕೈಯಿಂದ ತಲೆಗೆ ಹೊಡೆದಿದ್ದು, ಆರೋಪಿ 3 ನೇದ್ದವನು ಚಾಸಾ.4 ನೆದ್ದವನಿಗೆ ಕೈ ಹಿಡಿದು ದೊಬ್ಬಿಕೊಟ್ಟಿದ್ದು ಚಾಸಾ.4 ನೆದ್ದವನು ಕೆಳಗೆ ಬಿದ್ದಿದ್ದು, ಆ ಮೂಲಕ ಆರೋಪಿತರಾದ ನೀವು

ಭಾ.ದಂ.ಸಂ. ಕಲಂ 323 ಸಹವಾಚಕ ಕಲಂ 34ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಮೂರನೆಯದಾಗಿ ಮೇಲೆ ಹೇಳಲಾದ ದಿನ ಸಮಯ ಮತ್ತು ಸ್ಥಳದಲ್ಲಿ ಆರೋಪಿತರೆಲ್ಲರೂ ಏಕೋದ್ದೇಶವನ್ನು ಈಡೇರಿಸಿಕೊಳ್ಳುವುದರ ಸಲುವಾಗಿ ಬಂದು ಆರೋಪಿ 2 ನೇದ್ದವನು ತನ್ನ ಕೈಯಲ್ಲಿದ್ದ ಬಡಿಗೆಯಿಂದ ಚಾಸಾ.1 ನೇದ್ದವರ ಬಲಕೈ ರೆಟ್ಟೆಗೆ ಹಾಗೂ ಬಲಗಡೆ ಸೊಂಟದ ಮೇಲೆ ಮತ್ತು ಎಡಕಾಲು ಹಿಮ್ಮಡಿಗೆ ಹೊಡೆದು ಗುಪ್ತಗಾಯ ಪಡಿಸಿದ್ದು ಹಾಗೂ ಆರೋಪಿ .2 ನೇದ್ದವನು ತನ್ನ ಕೈಯಲ್ಲಿದ್ದ ಬಡಿಗೆಯಿಂದ ಚಾಸಾ.4 ನೇದ್ದವನಿಗೆ ಎಡಕಾಲಿನ ತೊಡೆಗೆ ಮತ್ತು ಎಡ ಭುಜಕ್ಕೆ ಹೊಡೆದು ಗುಪ್ತಗಾಯ ಪಡಿಸಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ 324 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ನಾಲ್ಕನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶವನ್ನು ಈಡೇರಿಸಿಕೊಳ್ಳುವುದರ ಸಲುವಾಗಿ ಬಂದು, ಆರೋಪಿ 1 ರಿಂದ 3 ನೇದ್ದವರು ಕೂಡಿ ಬಂದು ಚಾಸಾ.1 ಮತ್ತು 4 ನೇದ್ದವರಿಗೆ ಹೊಲದಲ್ಲಿ ಹೊಗದಂತೆ ರಸ್ತೆಯಲ್ಲಿ ತಡೆದು ಭೊಸಡಿ ಮಕ್ಕಳೆ ಈ ಹೊಲ ನಮ್ಮದಿದೆ ನಾವು ರಾಶಿ ಮಾಡುತ್ತೆವೆ ನೀವು ಯಾರು ನಮಗೆ ಕೆಳುವವರು ಅಂತಾ ಜಗಳ ತೆಗೆದು ಅವಾಚ್ಯವಾಗಿ ಬೈದು ಸಾರ್ವಜನಿಕ ಶಾಂತತೆಗೆ ಭಂಗ ಉಂಟು ಮಾಡಿದ್ದು ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ 504 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕೊನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶವನ್ನು ಈಡೇರಿಸಿಕೊಳ್ಳುವುದರ ಸಲುವಾಗಿ ಬಂದು, ಆರೋಪಿತರು ಜಗಳ ಬಿಟ್ಟು ಹೋಗುವಾಗ ಚಾಸಾ.1 ಮತ್ತು 4 ನೇದ್ದವರಿಗೆ ನೀವು ಇನ್ನೊಮ್ಮೆ ನಮ್ಮ ಹೊಲದ ಹತ್ತಿರ ಬಂದರೆ ನಿಮಗೆ ಜೀವಂತ ಬಿಡುವುದಿಲ್ಲ ಹೊಡೆದು ಕೊಲೆ ಮಾಡುತ್ತೆವೆ ಅಂತಾ ಜೀವದ ಬೇದರಿಕೆ ಹಾಕಿದ್ದು, ನೀವು ಭಾ.ದಂ.ಸಂ.ಕಲಂ 506 ಸಹವಾಚಕ ಕಲಂ 34ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

ಸಹಿ/-

ದಿನಾಂಕಃ 09-07-2025

ಪ್ರ.ದ.ನ್ಯಾ.ದಂ. ಸೇಡಂ.

**<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.</u>**

**<u>ಸಿಸಿ ನಂ.208/2020</u>**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಪೊಲೀಸ್ ಠಾಣೆ,

-ಃಃ ವಿರುದ್ದ ಃಃ-

ಆರೋಪಿ ನಂಃ 1. ಮಾಹಾದೇವಪ್ಪಾ ತಂದೆ ಬಸಪ್ಪಾ @ ಬಸಣ್ಣಾ ಕುಂಬಾರ
ವಃ 40 ವರ್ಷ, ಉಃ ಒಕ್ಕಲುತನ
ಸಾಃ ದುಗನೂರ ಗ್ರಾಮ, ತಾಃ ಸೇಡಂ ಹಾಗೂ ಇತರರು .

**<u>ಆರೋಪಿತರ ಹೇಳಿಕೆ</u>**

ಪ್ರಃ-1) ಈ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉಃ- ಆ-1

ಆ-2

ಆ-3

ಪ್ರಃ-2) ನಿಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತಿರೊ ಅಥವಾ ವಿಚಾರಣೆ ನಡೆಯಬೇಕಾ?

ಉಃ- ಆ-1

ಆ-2

ಆ-3

(ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ಸಹಿ/-

ದಿನಾಂಕಃ 07-09-2025 ಪ್ರ.ದ.ನ್ಯಾ.ದಂ. ಸೇಡಂ.